## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಕಾರವಾರ

ಸಿ.ಸಿ. ನಂಃ 140/2014 ಪಿಡಬ್ಲ್ಯೂಃ 2

ಸಿ.ಡಬ್ಲ್ಯು ಃ 2

ಸಾಕ್ಷಿದಾರರ ಹೆಸರು ಃ ನಾಗಾರಾಜ್ ಗಣಪತಿ ಚಂದಾವರ್

ವಯಸ್ಸು ಃ 38 ವರ್ಷ

ಉದ್ಯೋಗ ಃ ಅಂಗಡಿ ವ್ಯಾಪಾರ

ವಾಸ್ತವ್ಯ ಃ ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 17-12-2018

***ಮುಖ್ಯ ವಿಚಾರಣೆಃ ಶ್ರೀಮತಿ ಎಪಿಪಿಯವರಿಂದ ಃ-***

ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರತಿಸಿದ್ದರಿಂದ ಸದ್ರಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ನಿಪಿ-2 ವೇಲೆ ಸಹಿಯನ್ನು ದಿಃ 27-03-2008 ರಂದು ಚಾಸಾ-1 ರವರ ಮನೆಯ ಮುಂದೆ ಮಾಡಿರುತ್ತೇನೆ. ಫಿರ್ಯಾದುದಾರಳ ಮನೆಯಲ್ಲಿ ಕಳ್ಳತನವಾಗಿದೆ ಎಂದು ಸಹಿ ಮಾಡಿರುತ್ತೇನೆ. ಪೊಲಿಸರು ಪಂಚಾನಮೆಯನ್ನು ಬರೆದಿದ್ದು ಅಕ್ಕೆ ಸಹಿ ಮಾಡಲು ಹೇಳಿದ್ದರಿಂದ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯ ಸಮಯಕ್ಕೆ ಮುಮಾ-1 ನ್ನು ಜಪ್ತುಪಡಿಸಿಕೊಂಡರು. ಮುಮಾ-1 ನ್ನು ಚಾಸಾ-1 ರವರೇ ತೋರಿಸಿರುತ್ತಾರೆ. ನನ್ನೊಂದಿಗೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಪಂಚನಾಮೆಯನ್ನು ಸಂಜೆ 5-30 ಇಂದ 7-00 ಗಂಟೆಯವರೆಗೆ ಬರೆಯಲಾಯಿತು.

***ಪಾಟೀ ಸವಾಲುಃ ಶ್ರೀ ಪಿ ಬಿಟಿ ಯವರಿಂದ***

ಪಂಚನಾಮೆಯನ್ನು ಬರೆಯಲು ನಿರ್ದೆಶನ ಪೋಲಸರಿಗೆ ನಾನು ನೀಡಿಲ್ಲ ಎಂದರೆ ಸರಿ. ಪೊಲಿಸರು ಸಹಿ ಮಾಡಲು ಹೇಳಿದ್ದಕ್ಕೆ ಸಹಿ ಮಾಡಿದ್ದೆ ಎಂದರೆ ಸರಿ. ಚಾಸಾ-1 ರವರನ್ನು 15 ವರ್ಷಗಳಿಂದ ನಾನು ಪರಿಚಯಿಸುತ್ತೇನೆ. ಘಟನಾ ಸ್ಥಳದಲ್ಲಿ ಪಂಚನಾಮೆ ಆಗಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ನನ್ನ ನೆರೆಹೊರೆಯವರಳಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು.)***

***ಓ. ಹೇ. ಕೇ. ಸರಿ ಇದೆ.***

***ಹೆ. ಪ್ರ. ದ. ನ್ಯಾ. ದಂ. ಕಾರವಾರ***